# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್–2132/2016/ಡಿಆರ್‌ಇ–1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 1/03/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ.ಡಿ.ಆರ್.ದುಗ್ಗಪ್ಪಗೌಡ, ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ, ಮೂಡಿಗೆರೆ, ಚಿಕ್ಕಮಗಳೂರು, ಇವರು ಸಲ್ಲಿಸಿರುವ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ವರದಿಯನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

******

1. ಶ್ರೀ.ಡಿ.ಆರ್.ದುಗ್ಗಪ್ಪಗೌಡ, ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ, ಮೇಗಳಪೇಟೆ, ಕೆ.ಎಂ.ರೋಡ್, ಮೂಡಿಗೆರೆ, ಚಿಕ್ಕಮಗಳೂರು, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ.ಎಂ.ಎಸ್.ಮಾಣಿಕ್, ಉಪ ಅರಣ್ಯ ಸಂರಕ್ಷಣಾಧಿಕಾರಿ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರು ತಮ್ಮ ದೂರಿನಲ್ಲಿ ಎದುರುದಾರರು ಕುರುಬ ಜನಾಂಗಕ್ಕೆ ಸೇರಿದವರಾಗಿದ್ದು, ಪರಿಶಿಷ್ಟ ಪಂಗಡದ ಪ್ರಮಾಣ ಪತ್ರವನ್ನ ಪಡೆದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಕೆಲಸಕ್ಕೆ ಸೇರ್ಪಡೆಯಾಗಿರುತ್ತಾರೆ. ಎದುರುದಾರರ ಜಾತಿಯ ಬಗ್ಗೆ ಸೂಪರಿಂಟೆಂಡೆಂಟ್ ಅಫ್ ಪೊಲೀಸ್, ನಾಗರೀಕ ಹಕ್ಕುಗಳ ಜಾರಿ ನಿರ್ದೇಶನಾಲಯ (ಸಿ.ಬಿ.ಡಿ.) ಗುಲ್ಬರ್ಗ ಇವರು ತನಿಖೆ ನಡೆಸಿ ಪತ್ತ ಸಂ:ಅಪರಾಧ:46 ಬ್ರಹ್ಮ:ನಾಹಾನಜಾನಿ:ಭೂ 97:190 ದಿ.4/10/2008 ರಲ್ಲಿ ತನಿಖಾ ವರದಿಯನ್ನು ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು ಇವರಿಗೆ ದಾಖಲೆಗಳೊಂದಿಗೆ ಸಲ್ಲಿಸಿರುತ್ತಾರೆ. ಆದರೆ ಈ ದಿನಾಂಕದವರೆಗೂ ಅವರ ವಿರುದ್ಧ ಯಾವುದೇ ಕ್ರಮ ಜರುಗಿಸಿರುವುದಿಲ್ಲ. 2002–03ನೇ ಸಾಲಿನ ಇಲಾಖಾ ವಿಚಾರಣಾ ವರದಿಯನ್ನು ಮುಂದಿಟ್ಟುಕೊಂಡು 2013ನೇ ಸಾಲಿನಲ್ಲಿ ಎಂ.ಎಸ್.ಮಾಣಿಕ್ ರವರು ಸುಳ್ಳು ಜಾತಿ ಪ್ರಮಾಣ ಪತ್ರದ ಪ್ರಕರಣವನ್ನು ಮುಚ್ಚಿ ಹಾಕಿರುತ್ತಾರೆ. 2002 ರ ವಿಚಾರಣಾ ವರದಿಯಲ್ಲಿ ಸರ್ಕಾರದ ಆದೇಶ ಸಂ:ಎಸ್‌ಡಬ್ಲ್ಯೂಎಲ್ 63 ಎಸ್‌ಡಿಎಲ್ 85 ದಿ.23/1/1986 ರ ಆದೇಶವನ್ನು ಮುಂದಿಟ್ಟುಕೊಂಡು ಎಂ.ಎಸ್.ಮಾಣಿಕ್ ಇವರ ವಿರುದ್ಧದ ಅಪರಾಧ ಸಾಬೀತಾಗಿಲ್ಲವೆಂದು ಆದೇಶಿಸಿರುತ್ತಾರೆ. ವಿಚಾರಣಾಧಿಕಾರಿಯಾದ ಶ್ರೀ.ವೈ.ಆರ್.ಸಾಹುಕಾರ್ ಇವರು ಸರ್ಕಾರದ ಆದೇಶ ಸಂ.ಎಸ್‌ಡಬ್ಲ್ಯೂಎಲ್ 63 ಎಸ್‌ಡಿಎಲ್ 85 ದಿ.23/1/1986 ರ ಆದೇಶದ ಮೇರೆಗೆ ಎಂ.ಎಸ್.ಮಾಣಿಕ್ ಇವರನ್ನು ದೋಷಮುಕ್ತಗೊಳಿಸಿ ವಿಚಾರಣಾ ವರದಿ ನೀಡಿದ್ದು, ಅದರ ಪ್ರಕಾರವಾಗಿ ಎಂ.ಎಸ್.ಮಾಣಿಕ್ ಗೊಂಡ ಜಾತಿಗೆ ಸೇರದೆ ಹಿಂದುಳಿದ ಕುರುಬ ಜಾತಿಗೆ

ಸೇರಿರುವುದು ವ್ಯಕ್ತವಾಗುತ್ತದೆ. ಆದ್ದರಿಂದ, ಸುಳ್ಳು ಜಾತಿ ಪ್ರಮಾಣ ಪತ್ರ ಸಲ್ಲಿಸಿ ಸರ್ಕಾರಕ್ಕೆ ವಂಚಿಸಿರುವ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಕೋರಿರುತ್ತಾರೆ.

3. ದೂರುದಾರರು ದೂರಿನ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು. ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ಈ ಹಿಂದೆ ಶ್ರೀ.ಡಿ.ಆರ್.ದುಗ್ಗಪ್ಪಗೌಡರಂತಹ ಜನರು ಅವರ ಮೇಲೆ ಆರೋಪಿಸಿದ ನಂತರ ನೇಮಕಾತಿ ಪ್ರಾಧಿಕಾರವು ಜಿಲ್ಲಾಧಿಕಾರಿ, ಗುಲ್ಬರ್ಗ ಇವರಿಂದ ಎದುರುದಾರರ ಜಾತಿಯ ಬಗ್ಗೆ ಕೂಲಂಕುಷವಾಗಿ ವಿಚಾರಣೆ ನಡೆಸಿ ವರದಿ ಪಡೆದ ನಂತರ ಅವರನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಹುದ್ದೆಗೆ ನೇಮಿಸಲಾಗಿದೆ. ಅಲ್ಲದೆ ಕೆಲವರು ನೇಮಕಾತಿ ಪ್ರಾಧಿಕಾರಕ್ಕೆ ದೂರು ಸಲ್ಲಿಸಿದ್ದು, ಅದರಂತೆ ನೇಮಕಾತಿ ಪ್ರಾಧಿಕಾರವು ಇಲಾಖಾ ವಿಚಾರಣೆಗೆ ಒಳಪಡಿಸಿ ಸರ್ಕಾರಿ ಆದೇಶ ಸಂ.ಅಪಜೀ 47 ಆಇವಿ 2000 ಬೆಂಗಳೂರು ದಿ.29/1/2013 ರಲ್ಲಿ ಆದೇಶ ಹೊರಡಿಸಿ ಅವರ ಮೇಲೆ ಸಲ್ಲಿಸಿರುವ ಆಪಾದನೆಗಳು ಸಾಬೀತಾಗಿಲ್ಲವೆಂದು ತಿಳಿಸಿರುತ್ತಾರೆ. ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಗುಲ್ಬರ್ಗ ಇವರಿಗೆ ಕೆಲವರು ದೂರು ಸಲ್ಲಿಸಿದ ಮೇರೆಗೆ ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಗುಲ್ಬರ್ಗ ಇವರು ಎದುರುದಾರರ ಮೇಲೆ ಗುಲ್ಬರ್ಗ ಬ್ರಹ್ಮಾಪುರ ಪೋಲೀಸ್ ಠಾಣೆಯಲ್ಲಿ ಐ.ಪಿ.ಸಿ. ಕಲಂ 420 ಮತ್ತು 471 ಅಡಿಯಲ್ಲಿ ಕೇಸು ದಾಖಲಿಸಿರುತ್ತಾರೆ. ಸದರಿ ಆಪಾದನೆಯ ಬಗ್ಗೆ ನ್ಯಾಯಾಲಯವು ಕ್ರಿಮಿನಲ್ ರಿವಿಜನ್ ಪಿಟಿಷನ್ ನಂ.72/12 ರಂತೆ ವಿಚಾರಣೆ ಮಾಡಿ ದಿ.11/11/13 ರ ಆದೇಶದಂತೆ ಡಿಸ್‌ಚಾರ್ಜ್ ಮಾಡಿರುತ್ತಾರೆ. ಸದರಿ 3 ಆದೇಶಗಳಲ್ಲಿ ಅವರು ಯಾವ ಜಾತಿಗೆ ಸೇರಿದ್ದಾರೆಂಬುದು ಸ್ಪಷ್ಟವಾಗಿರುತ್ತದೆ. ದೂರುದಾರರು ತಪ್ಪು ಮಾಹಿತಿ ನೀಡಿರುತ್ತಾರೆ. ದೂರುದಾರರು 6 ತಿಂಗಳುಗಳಿಂದ ಎದುರುದಾರರ ಜಾತಿಯ ವಿಷಯವನ್ನು ಪ್ರಸ್ತಾಪಿಸಿ ರೂ.10 ಲಕ್ಷ ಹಣದ ಬೇಡಿಕೆ ಇಟ್ಟಿರುತ್ತಾರೆಂದು ಹೇಳಿರುತ್ತಾರೆ.

4. ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ಎಂ.ಎಸ್.ಮಾಣಿಕ್ ಇವರು 1995–96ನೇ ಸಾಲಿನಲ್ಲಿ ಅರಣ್ಯ ಇಲಾಖೆಗೆ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಗೊಂಡ ಜಾತಿಯ ಪ್ರಮಾಣ ಪತ್ರದ ಮೇಲೆ ಆಯ್ಕೆಯಾಗಿರುತ್ತಾರೆ. ಆದರೆ, ಅವರು ಆಯ್ಕೆಯಾಗುವ ಮೊದಲೇ 1992ನೇ ಸಾಲಿನಲ್ಲಿ ಗುಲ್ಬರ್ಗ ಜಿಲ್ಲಾಧಿಕಾರಿಗಳು ಎಂ.ಎಸ್.ಮಾಣಿಕ್ ರವರ ಜಾತಿಯನ್ನು ಪರಿಶೀಲಿಸಲು ಹಾಗೂ ಪ್ರಮಾಣ ಪತ್ರ ನೀಡಲು ಹೇಗೆ ಸಾಧ್ಯ. ಪ್ರಮಾಣ ಪತ್ರವನ್ನು ಜಿಲ್ಲಾಧಿಕಾರಿಗಳ ಪರವಾಗಿ ಬೇರೆ ಯಾರೊ ಸಹಿ ಮಾಡಿದ್ದು, ಅದನ್ನು ಒಪ್ಪಲು ಸಾಧ್ಯವಿಲ್ಲ. ಸರ್ಕಾರಿ ಆದೇಶ ಸಂ.ಅಪಜೀ 47 ಅಇವಿ 2000 ಬೆಂಗಳೂರು ದಿ.29/1/2013 ರ ಆದೇಶವನ್ನು ವಿಚಾರಣಾಧಿಕಾರಿಯಾದ ಶ್ರೀ.ವೈ.ಆರ್.ಸಾಹುಕಾರ್ ಇವರ ವಿಚಾರಣಾ ವರದಿಯ ಆಧಾರದ ಮೇಲೆ ಹೊರಡಿಸಲಾಗಿದೆ. 2002–03ನೇ ಸಾಲಿನ ಇಲಾಖಾ ವಿಚಾರಣಾ ವರದಿಯನ್ನು ಮುಂದಿಟ್ಟುಕೊಂಡು 2013ನೇ ಸಾಲಿನಲ್ಲಿ ಎಂ.ಎಸ್.ಮಾಣಿಕ್‌ರವರು ಸುಳ್ಳು ಜಾತಿ ಪ್ರಮಾಣ ಪತ್ರದ ಪ್ರಕರಣವನ್ನು ಮುಚ್ಚಿ ಹಾಕಿರುತ್ತಾರೆ. ಎದುರುದಾರರ ಜಾತಿಯ ಬಗ್ಗೆ ಅಪರ ಪೊಲೀಸ್ ಮಹಾ ನಿರ್ದೇಶಕರು, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು, ಇವರು ನೀಡಿದ ತನಿಖಾ ವರದಿಯ ಪ್ರಕಾರ ಆರೋಪ ಸಾಬೀತಾಗಿರುತ್ತದೆಯೆಂದು ವರದಿ ನೀಡಿರುತ್ತಾರೆ. ಘನ ನ್ಯಾಯಾಲಯಕ್ಕೆ ನಾಗರೀಕ ಹಕ್ಕು ನಿರ್ದೇಶನಾಲಯ ಇವರ ತನಿಖಾ ವರದಿಯ ಬಗ್ಗೆ ಮಾಹಿತಿ ಇರುವುದಿಲ್ಲ. ಸದರಿ ಮಾಹಿತಿಯನ್ನು ಎಂ.ಎಸ್.ಮಾಣಿಕ್ ಇವರು ಮರೆಮಾಚಿ ನ್ಯಾಯಾಲಯದ ದಿಕ್ಕು ತಪ್ಪಿಸಿರುತ್ತಾರೆ. ಎಂ.ಎಸ್.ಮಾಣಿಕ್‌ರವರ ಮೇಲೆ ಗಂಭೀರವಾದ ಆರೋಪಗಳಿರುವುದರಿಂದ ಪ್ರಕರಣದ ದಿಕ್ಕು ತಪ್ಪಿಸಲು ದೂರುದಾರರ ವಿರುದ್ಧ ಹಣ ಬೇಡಿಕೆ ಆರೋಪವನ್ನು ಮಾಡಿರುತ್ತಾರೆ.

ಆದ್ದರಿಂದ ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು, ಇವರ ವರದಿಯನ್ನು ಪರಿಗಣಿಸಿ ವಿಚಾರಣೆಯನ್ನು ಕೈಗೊಳ್ಳಬೇಕೆಂದು ಕೋರಿರುತ್ತಾರೆ.

5. ಎದುರುದಾರರು ತನ್ನ ಆಕ್ಷೇಪಣೆಯ ಜೊತೆ ದಿ.20/4/92 ರಂದು ಜಿಲ್ಲಾಧಿಕಾರಿಗಳು, ಗುಲ್ಬರ್ಗ ಇವರ ಪರವಾಗಿ ಮಾಣಿಕ್ ಇವರು ಗೊಂಡ ಜಾತಿಗೆ ಸೇರಿರುತ್ತಾರೆಂದು ಮತ್ತು ಪರಿಶಿಷ್ಟ ಪಂಗಡಕ್ಕೆ ಸಂಬಂಧಪಟ್ಟವರಾಗಿರುತ್ತಾರೆಂದು ಸರ್ಕಾರಕ್ಕೆ ನೀಡಿರುವ ವರದಿಯ ಪ್ರತಿಯನ್ನು ಹಾಜರು ಪಡಿಸಿರುತ್ತಾರೆ. ದಿ.29/1/2013 ರಂದು ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು), ಅರಣ್ಯ ಪರಿಸರ ಮತ್ತು ಜೀವಶಾಸ್ತ್ರ ಇಲಾಖೆ ಇವರು ಎದುರುದಾರರ ವಿರುದ್ಧ ನಡೆದ ಇಲಾಖಾ ವಿಚಾರಣೆಯಲ್ಲಿ ಮಾಡಿರುವ ಅಂತಿಮ ಆದೇಶದ ಪ್ರತಿಯನ್ನು ಹಾಜರು ಪಡಿಸಿರುತ್ತಾರೆ. ಸದರಿ ಆದೇಶವನ್ನು ಪರಿಶೀಲಿಸಿದಾಗ, ಶ್ರೀ.ಎಂ.ಎಸ್.ಮಾಣಿಕ್ ರವರು ಗೊಂಡ ಜಾತಿಗೆ ಸೇರಿದವರಾಗಿದ್ದಾರೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಗುಲ್ಬರ್ಗ ಜಿಲ್ಲಾಧಿಕಾರಿಗಳು ನೀಡಿದಂತಹ ವರದಿಯಲ್ಲಿ ಅವರು ಪರಿಶಿಷ್ಟ ಪಂಗಡದ ಗೊಂಡ ಜಾತಿಗೆ ಸೇರಿದವರಾಗಿರುತ್ತಾರೆಂದು ದೃಢೀಕರಿಸಿರುತ್ತಾರೆ. ಯಾವುದೆ ಒಂದು ಜಾತಿ ಪತ್ರದ ಸತ್ಯ ಶೀಲತೆಯ ಬಗ್ಗೆ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದುವುಗಳ ಮೀಸಲಾತಿ) ಅಧಿನಿಯಮ 1990 ರಡಿಯಲ್ಲಿ ಹೊರಡಿಸಲಾಗಿರುವ ನಿಯಮ 5 ರಂತೆ ಪ್ರತಿ ಜಿಲ್ಲೆಯಲ್ಲೂ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಜಾತಿ ಪ್ರಮಾಣ ಪತ್ರ ಪರಿಶೀಲನೆ ಸಮಿತಿಯು ರಚಿತವಾಗಿದ್ದು, ಈ ಸಮಿತಿಗೆ ಸದರಿ ಅಧಿನಿಯಮದ ಪ್ರಕರಣ 4-ಸಿ(2) ರಂತೆ ಪ್ರಮಾಣ ಪತ್ರದ ಪರಿಶೀಲನೆಗೆ ಸಂಬಂಧಿಸಿದ ಪರಿಶೀಲನಾ ಸಮಿತಿಗೆ ಅರ್ಜಿ ಸಲ್ಲಿಸಿ ಜಾತಿ ಪ್ರಮಾಣ ಪತ್ರವನ್ನು ಪರಿಶೀಲಿಸಬಹುದಾಗಿದೆ. ಆದರೆ ಈ ಪ್ರಕರಣದಲ್ಲಿ ಅಂತಹ ಪ್ರಕ್ರಿಯೆಯನ್ನು ಕೈಗೊಂಡಿರುವುದಿಲ್ಲ. ಈ ಮೇಲ್ಕಂಡ ಎಲ್ಲಾ ಅಂಶಗಳಿಂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಯನ್ನು ಪಡೆಯಲು ಅಥವಾ ಆ ಹುದ್ದೆಗೆ ಆಯ್ಕೆಯಾಗಲು ಶ್ರೀ.ಎಂ.ಎಸ್.ಮಾಣಿಕ್‌ರವರು ಫೋರ್ಜರಿ/ಬೋಗಸ್ ಜಾತಿ ಪ್ರಮಾಣ ಪತ್ರವನ್ನು ನೀಡಿರುವ/ಸಲ್ಲಿಸಿರುವ ಆಪಾದನೆಯು ನಿಸ್ಸಂದೇಹವಾಗಿ ಸಾಬೀತಾಗುತ್ತದೆಯೆಂದು ಹೇಳಲು ಬರುವುದಿಲ್ಲ. ಆದ್ದರಿಂದ ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಸಂದರ್ಭಗಳಿಂದಾಗಿ ಶ್ರೀ.ಎಂ.ಎಸ್.ಮಾಣಿಕ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಇವರ ಮೇಲೆ ಬಾಕಿ ಇದ್ದ ಶಿಸ್ತು ಕ್ರಮವನ್ನು ಈ ಹಂತದಲ್ಲಿ ಮುಕ್ತಾಯಗೊಳಿಸಿ ಆದೇಶಿಸಿದೆಯೆಂದು ಆದೇಶ ಮಾಡಿರುವುದು ಕಂಡುಬರುತ್ತದೆ. 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಕ್ರಿಮಿನಲ್ ರಿವಿಜನ್ ಪಿಟಿಷನ್ ನಂ.72/12 ರಲ್ಲಿ ಆದ ಆದೇಶದ ಪ್ರತಿಯನ್ನು ಹಾಜರು ಪಡಿಸಿದ್ದು, ಅದನ್ನು ಪರಿಶೀಲಿಸಿದಾಗ, ಐ.ಪಿ.ಸಿ. ಕಲಂ 420 ಮತ್ತು 471 ರಂತೆ ಎದುರುದಾರರ ವಿರುದ್ಧ ದಾಖಲಾದ ಕ್ರಿಮಿನಲ್ ಪ್ರಕರಣದಲ್ಲಿ ಎದುರುದಾರರನ್ನು ಡಿಸ್‌ಚಾರ್ಜ್ ಮಾಡಿರುವುದು ಕಂಡುಬರುತ್ತದೆ.

6. ಎದುರುದಾರರು ಹಾಜರು ಪಡಿಸಿರುವ ಜಿಲ್ಲಾಧಿಕಾರಿಗಳ ಪರವಾಗಿ ನೀಡಿರುವ ದಿ.20/4/92 ರ ವರದಿಯನ್ನು ಪರಿಶೀಲಿಸಿದಾಗ, ಅದನ್ನು ಸಹಾಯಕ ಕಮೀಷನರ್, ಗುಲ್ಬರ್ಗ ಇವರು ಪರಿಶೀಲನೆ ಮಾಡಿ ವರದಿ ಸಲ್ಲಿಸಿ ಆ ಆಧಾರದಲ್ಲಿ ಜಿಲ್ಲಾಧಿಕಾರಿಗಳ ಪರವಾಗಿ ನೀಡಲಾಗಿರುವುದೆಂದು ಕಂಡುಬರುತ್ತದೆ. ಆದರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸಂಬಂಧಪಟ್ಟಂತೆ ಜಾತಿಯ ಸತ್ಯ ಶೀಲತೆಯನ್ನು ಜಾತಿ ಪ್ರಮಾಣ ಪತ್ರ ಪರಿಶೀಲನಾ ಸಮಿತಿಯು ಮಾಡಬೇಕೇ ಹೊರತು ಬೇರೆ ಯಾವುದೇ ಪ್ರಾಧಿಕಾರಕ್ಕೂ ಆ ಬಗ್ಗೆಪರಿಶೀಲಿಸಲು ಅವಕಾಶವಿರುವುದಿಲ್ಲ. ಆದರೆ, ಈ ಪ್ರಕರಣದಲ್ಲಿ ಜಾತಿ ಪ್ರಮಾಣ ಪತ್ರ ಪರಿಶೀಲನಾ ಸಮಿತಿಯು ಜಾತಿಯ ಬಗ್ಗೆ ಪರಿಶೀಲನೆ ನಡೆಸಿರುವುದು

ಕಂಡುಬಂದಿರುವುದಿಲ್ಲ ಮತ್ತು ಸರ್ಕಾರದ ಆದೇಶದಲ್ಲಿ ಪರಿಶೀಲನಾ ಸಮಿತಿಗೆ ಅರ್ಜಿ ಸಲ್ಲಿಸಿ ಜಾತಿ ಪ್ರಮಾಣ ಪತ್ರವನ್ನು ಪರಿಶೀಲಿಸುವ ಪ್ರಕ್ರಿಯೆಯನ್ನು ಕೈಗೊಂಡಿರುವುದಿಲ್ಲವೆಂದು ಹೇಳಿರುತ್ತಾರೆ. ಅಲ್ಲದೆ, ದೂರುದಾರರು ಹಾಜರು ಪಡಿಸಿರುವ ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯದ ವರದಿಯನ್ನು ಪರಿಶೀಲಿಸಿದಾಗ, ಎದುರುದಾರರು ಕುರುಬ ಜಾತಿಗೆ ಸೇರಿದವರೆಂದು ವರದಿ ನೀಡಿರುವುದು ಕಂಡುಬರುತ್ತದೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ, ಜಾತಿ ಪ್ರಮಾಣ ಪತ್ರ ಪರಿಶೀಲನಾ ಸಮಿತಿಯಿಂದ ಯಾವುದೇ ವರದಿ ಅಥವಾ ಪರಿಶೀಲನಾ ವರದಿ ಪಡೆಯದೆ ಎದುರುದಾರರ ಜಾತಿಯ ಬಗ್ಗೆ ತೀರ್ಮಾನಗಳನ್ನು ಕೈಗೊಂಡಿರುವುದು ಕಂಡುಬರುತ್ತದೆ. ಆದ್ದರಿಂದ, ಎದುರುದಾರರ ಜಾತಿಯ ಬಗ್ಗೆ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ಜಾತಿ ಪ್ರಮಾಣ ಪತ್ರ ಪರಿಶೀಲನಾ ಸಮಿತಿಗೆ ಆದೇಶಿಸಲಾಗಿತ್ತು.

7. ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಗುಲ್ಬರ್ಗ ಇವರು ಹಾಜರಾಗಿ ವರದಿ ಸಲ್ಲಿಸಲು 4 ತಿಂಗಳು ಸಮಯಾವಕಾಶ ಕೋರಿದ್ದು, ಅವರು ಎದುರುದಾರರಿಗೆ ಸಂಬಂಧಪಟ್ಟಂತೆ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ರಾಜೋಳ ಬಸವಕಲ್ಯಾಣ ತಾಲ್ಲೂಕು, ಬೀದರ್ ಜಿಲ್ಲೆ ಇದರ ದಾಖಲಾತಿ ವಹಿಯ ಪ್ರತಿಯನ್ನು ಹಾಜರು ಪಡಿಸಿರುತ್ತಾರೆ. ಸದರಿ ದಾಖಲಾತಿಯಲ್ಲಿ ಎದುರುದಾರರ ತಂದೆಯ ಹೆಸರು ಮಲ್ಲಪ್ಪ ಎಂದು ನಮೂದಾಗಿದ್ದು, ಅವರು ಕುರುಬ ಜಾತಿ ಎಂದು ನಮೂದಿರುವುದು ಕಂಡುಬರುತ್ತದೆ. ಆದ್ದರಿಂದ, ಎದುರುದಾರರ ವಿರುದ್ಧ ಮಾಡಲಾಗಿರುವ ಇಲಾಖಾ ವಿಚಾರಣೆಯ ಬಗ್ಗೆ ಎಲ್ಲಾ ದಾಖಲಾತಿಗಳ ಸಮೇತ ಹಾಜರಾಗುವಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಇಲಾಖೆ, ಬೆಂಗಳೂರು ಇವರಿಗೆ ಆದೇಶಿಸಲಾಗಿತ್ತು.

8. ಸರ್ಕಾರದ ಅಧೀನ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಇಲಾಖೆ ಇವರು ಹಾಜರಾಗಿ ಕಡತದ ಟಿಪ್ಪಣಿ ಹಾಳೆಯ ಪ್ರತಿ ಹಾಗೂ ಇತರ ದಾಖಲಾತಿಗಳ ಪ್ರತಿಗಳನ್ನು ಹಾಜರು ಪಡಿಸಿದ್ದು, ಅದನ್ನು ಪರಿಶೀಲಿಸಿದಾಗ, ಅರಣ್ಯ ಇಲಾಖೆಯ ಕಡತದ ಟಿಪ್ಪಣಿ ಹಾಳೆಯನ್ನು ಹಾಜರು ಪಡಿಸಿದ್ದು, ಅದರಲ್ಲಿ ಎದುರುದಾರರು ಹಿಂದೂ ಕುರುಬ ಜನಾಂಗಕ್ಕೆ ಸೇರಿದವರಾಗಿರುತ್ತಾರೆಂದು ಕಂಡುಬಂದಿರುವುದರಿಂದ, ಸದರಿಯವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲು ಮತ್ತು ಶಿಸ್ತು ಕ್ರಮವನ್ನು ಕೈಗೊಳ್ಳಲು ದಿ.22/3/1997 ರ ಟಿಪ್ಪಣಿಯಂತೆ ಕ್ರಮ ವಹಿಸಿರುವುದು ಕಂಡುಬರುತ್ತದೆ. ದಿ.29/4/2000 ರ ಟಿಪ್ಪಣಿಯ ಕಂಡಿಕೆ 98 ರಲ್ಲಿ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಅರಣ್ಯ ಸಚಿವರು ತೀರ್ಮಾನಿಸಿರುವುದು ಕಂಡುಬರುತ್ತದೆ. ನಂತರದಲ್ಲಿ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಿದ್ದು, ಇಲಾಖಾ ವಿಚಾರಣೆಯಲ್ಲಿ ಆರೋಪ ಸಾಬೀತಾಗಿರುವುದಿಲ್ಲವೆಂದು ವಿಚಾರಣಾಧಿಕಾರಿ ವರದಿಯನ್ನು ನೀಡಿರುವುದು ಕಂಡುಬರುತ್ತದೆ. ದಿ.28/12/2005 ರ ಟಿಪ್ಪಣಿಯ ಕಂಡಿಕೆ 247 ರಂತೆ ವಿಚಾರಣಾಧಿಕಾರಿಯ ವಿಚಾರಣಾ ವರದಿಯನ್ನು ತಿರಸ್ಕರಿಸಲು ಮತ್ತು 1957 ರ ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ) ನಿಯಮಾವಳಿಯ 11ಎ ನಿಯಮದಡಿ ಮತ್ತೊಬ್ಬ ವಿಚಾರಣಾ ಪ್ರಾಧಿಕಾರಿಯನ್ನು ನೇಮಿಸಿ ಇಲಾಖಾ ವಿಚಾರಣೆಯನ್ನು ನಡೆಸಬಹುದಾಗಿದೆಯೆಂದು ಸರ್ಕಾರದ ಅಧೀನ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಇಲಾಖೆ ಇವರು ಟಿಪ್ಪಣಿಯನ್ನು ಮಂಡಿಸಿರುವುದು ಕಂಡುಬರುತ್ತದೆ.

9. ಕಡತದ ಟಿಪ್ಪಣಿಯ ಕಂಡಿಕೆ 317 ರಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಇಲಾಖೆ, ಇವರು ಈ ಕೆಳಗಿನಂತೆ ಟಿಪ್ಪಣಿಯನ್ನು ಮಂಡಿಸಿರುವುದು ಕಂಡುಬರುತ್ತದೆ.

> *"ಶ್ರೀ.ಎಂ.ಎಸ್.ಮಾಣಿಕ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಇವರು ಪರಿಶಿಷ್ಟ ಪಂಗಡದ 'ಗೊಂಡ' ಜಾತಿಗೆ ಸೇರಿದವರೆಂದು ಸುಳ್ಳು ಜಾತಿ ಪ್ರಮಾಣ ಪತ್ರ ಮತ್ತು ಆದಾಯ ಪ್ರಮಾಣ ಪತ್ರವನ್ನು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಸಲ್ಲಿಸಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗೆ ಆಯ್ಕೆಯಾಗಿರುವುದು ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯವು, ಸರ್ಕಾರಿ ಅಧಿನಿಯಮಗಳು, ಸರ್ಕಾರಿ ಆದೇಶಗಳು ಮತ್ತು ಸರ್ವೋಚ್ಚ ನ್ಯಾಯಾಲಯದ ತೀರ್ಪಿನನ್ವಯ ನಡೆಸಿದ ಪೂರ್ಣ ಪ್ರಮಾಣದ ವಿಚಾರಣೆಯಿಂದ ಸಾಬೀತಾಗಿದೆ. ಸದರಿ ಅಧಿಕಾರಿಯು ಪರಿಶಿಷ್ಟ ಪಂಗಡದ 'ಗೊಂಡ' ಜಾತಿ ಪ್ರಮಾಣ ಪತ್ರವನ್ನು ತಹಶೀಲ್ದಾರ್, ಗುಲ್ಬರ್ಗಾ, ಇವರು ದಿ.3-10-1989 ರಲ್ಲಿ ನೀಡಿದಂತೆ ತಾವೇ ಸ್ವತಃ ಜಾತಿ ಪ್ರಮಾಣ ಪತ್ರವನ್ನು ಸೃಷ್ಟಿಸಿಕೊಂಡು, ಅದರಂತೆ ಮೀಸಲಾತಿ ಆಧಾರದ ಮೇಲೆ ಸರ್ಕಾರಿ ನೌಕರಿ ಪಡೆದುಕೊಂಡು ನಿಜವಾದ ಪರಿಶಿಷ್ಟ ಪಂಗಡದವರಿಗೆ ಮತ್ತು ಸರ್ಕಾರಕ್ಕೆ ಮೋಸ ಮಾಡಿರುವ ಹಿನ್ನೆಲೆಯಲ್ಲಿ ಬ್ರಹ್ಮಪುರ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ.47/97 ರಲ್ಲಿ ಕಲಂ 198, 420 ಮತ್ತು 471 ಐಪಿಸಿ ಪ್ರಕಾರ ಪ್ರಕರಣ ದಾಖಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ಅಧಿಕಾರಿಯನ್ನು ಸರ್ಕಾರಿ ಸೇವೆಯಿಂದ ವಜಾ ಮಾಡಲು ಕರ್ನಾಟಕ ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ ಸೂಚಿಸಿರುವುದರ ಮೇರೆಗೆ ಕೂಡಲೇ ಕ್ರಮ ಕೈಗೊಳ್ಳಬೇಕಾಗಿದ್ದು, ಸಧ್ಯದಲ್ಲೇ ಸದರಿ ವಿಷಯವನ್ನು ಸಚಿವ ಸಂಪುಟದ ಮುಂದೆ ಮಂಡಿಸಲು ಕ್ರಮ ಕೈಗೊಳ್ಳಲಾಗುವುದು."* ಎಂದು ಟಿಪ್ಪಣಿಯನ್ನು ಮಂಡಿಸಿದ್ದು, ಅದನ್ನು ಮಾನ್ಯ ಮುಖ್ಯ ಮಂತ್ರಿಗಳ ಸಮಕ್ಷಮ ಅನುಮೋದನೆಗಾಗಿ ಮಂಡಿಸಿರುವುದು ಕಂಡುಬರುತ್ತದೆ. ಸದರಿ ಟಿಪ್ಪಣಿಯನ್ನು ಮಾನ್ಯ ಮುಖ್ಯ ಮಂತ್ರಿಗಳು ಕಂಡಿಕೆ 318 ರಂತೆ ಒಪ್ಪಿರುವುದು ಕಂಡುಬರುತ್ತದೆ.

10. ನಂತರದಲ್ಲಿ ಕಂಡಿಕೆ 564 ರಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಇಲಾಖೆ, ತಮ್ಮ ಟಿಪ್ಪಣಿಯನ್ನು ವಿಚಾರಣಾಧಿಕಾರಿಗಳ ವರದಿಯನ್ನು ಒಪ್ಪದಿರಲು ಇರುವ ಅಂಶಗಳನ್ನು ನಮೂದಿಸಿ ಆರೋಪಿತ ಅಧಿಕಾರಿಗೆ ಕಾರಣ ಕೇಳುವ ನೋಟೀಸನ್ನು ಜಾರಿಮಾಡಬಹುದು. ಕಾರಣ ಕೇಳುವ ನೋಟೀಸಿಗೆ ಅವರು ಸಲ್ಲಿಸಿದಂತಹ ಉತ್ತರವನ್ನು ಪರಿಗಣಿಸಿ ಮುಂದಿನ ಕ್ರಮ ಕೈಗೊಳ್ಳಬಹುದೆಂದು ಟಿಪ್ಪಣಿ ನಮೂದಿಸಿ ಅರಣ್ಯ ಸಚಿವರ ಅನುಮೋದನೆಗೆ ಮಂಡಿಸಿರುವುದು ಕಂಡುಬರುತ್ತಿದ್ದು, ಸದರಿ ಟಿಪ್ಪಣಿಯನ್ನು ಅರಣ್ಯ ಸಚಿವರು ಕಂಡಿಕೆ 565 ರಂತೆ ಅನುಮೋದಿಸಿರುವುದು ಕಂಡುಬರುತ್ತದೆ.

11. ನಂತರದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಇಲಾಖೆ, ಇವರು ಕಂಡಿಕೆ 623 ರಂತೆ ಈ ಪ್ರಕರಣದಲ್ಲಿ ಶ್ರೀ.ಎಂ.ಎಸ್.ಮಾಣಿಕ್ ಇವರು forged/bogus caste certificate ನ್ನು ನೀಡಿದ್ದಾರೆ ಎನ್ನುವ ಆಪಾದನೆಯು ನಿಸ್ಸಂದೇಹವಾಗಿ ಸಾಬೀತಾಗಿರುತ್ತದೆ ಎಂದು ಹೇಳಲು ಬರುವುದಿಲ್ಲ. ಆದ್ದರಿಂದ, ಈ ಪ್ರಕರಣವನ್ನು ಇಲ್ಲಿ ಮುಕ್ತಾಯಗೊಳಿಸಬಹುದು ಮತ್ತು ಕಂಡಿಕೆ 624 ರಂತೆ ಪ್ರತ್ಯೇಕವಾಗಿ ಮೇಲೆ ನಿರ್ಧರಿಸಿರುವಂತೆ ಜಾತಿ ಪ್ರಮಾಣ ಪತ್ರದ ಸಿಂಧುತ್ವವನ್ನು ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ಅಧಿನಿಯಮದಡಿ ಪರಿಶೀಲನೆಗೆ ಕಳುಹಿಸಲಾಗುವುದು ಎಂದು ಟಿಪ್ಪಣಿಯನ್ನು

ಅನುಮೋದನೆಗಾಗಿ ಮಂಡಿಸಿದ್ದು, ಸದರಿ ಟಿಪ್ಪಣಿಯನ್ನು ಕಂಡಿಕೆ 625 ರಂತೆ ಅರಣ್ಯ ಸಚಿವರು ಅನುಮೋದಿಸಿರುವುದು ಕಂಡುಬರುತ್ತದೆ.

12. ನಂತರದಲ್ಲಿ ಅಧೀನ ಕಾರ್ಯದರ್ಶಿ (ಸೇವೆಗಳು) ಇವರು ಕಂಡಿಕೆ 676, 677 ಮತ್ತು 678 ರಲ್ಲಿ ಈ ಕೆಳಗಿನಂತೆ ಟಿಪ್ಪಣಿಯನ್ನು ಮಂಡಿಸಿರುವುದು ಕಂಡುಬರುತ್ತದೆ.

*678) ಕಂಡಿಕೆ 624 ರಂತೆ ಶ್ರೀ.ಎಂ.ಎಸ್.ಮಾಣಿಕ್‌ರವರು ನೀಡಿದ ಜಾತಿ ಪ್ರಮಾಣ ಪತ್ರದ ಸಿಂಧುತ್ವವನ್ನು ಪರಿಶೀಲಿಸಿ ವರದಿ ನೀಡಬೇಕೆಂದು ಪುಟ 1019ರ ಪತ್ರದಲ್ಲಿ ಗುಲ್ಬರ್ಗಾ ಜಿಲ್ಲಾಧಿಕಾರಿಗಳನ್ನು ಕೋರಲಾಗಿತ್ತು. ಇದಕ್ಕೆ ಪ್ರತಿಯಾಗಿ ಗುಲ್ಬರ್ಗಾ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಬರೆದಿರುವ ಪುಟ 1039 ರ ದಿ.27/6/2013ರ ಪತ್ರದಲ್ಲಿ ತಿಳಿಸಿರುವ ಕಾರಣಗಳಿಂದ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ಅಧಿನಿಯಮ 1990 ಮತ್ತು ನಿಯಮಗಳು 1992 ಅಸ್ತಿತ್ವಕ್ಕೆ ಬರುವುದಕ್ಕಿಂತ ಮುಂಚಿತವಾಗಿ ನೀಡಲಾದ ಜಾತಿ ಪ್ರಮಾಣ ಪತ್ರದ ಮೇಲೆ ಈಗ ಸಿಂಧುತ್ವ ಪ್ರಮಾಣ ಪತ್ರ ನೀಡಲು ನಿಯಮದಲ್ಲಿ ಅವಕಾಶ ಇರುವುದಿಲ್ಲವೆಂದು ತಿಳಿಸಲಾಗಿದೆ.*

*677) ಗುಲ್ಬರ್ಗಾ ಜಿಲ್ಲಾಧಿಕಾರಿಗಳು ಸದರಿ ಪತ್ರದಲ್ಲಿ ಉಲ್ಲೇಖಿಸಿರುವ ದಿ.20/4/1992 ರ ವರದಿಯ ಪತ್ರವನ್ನು, ಕೆಳಗಿನ ಕಡತದ ಪುಟ 288-282ರಲ್ಲಿ ನೋಡಬಹುದು. ಗುಲ್ಬರ್ಗಾ ಜಿಲ್ಲಾಧಿಕಾರಿಗಳು ತಮ್ಮ ಪತ್ರದಲ್ಲಿ ತಿಳಿಸಿರುವ ಕಾರಣವನ್ನು ಒಪ್ಪಬಹುದಾಗಿದೆ. ಈ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯು ದಿ.30/6/2007 ರಂದು ಹೊರಡಿಸಿರುವ ಸುತ್ತೋಲೆಯಲ್ಲಿನ ಸೂಚನೆಗಳನ್ನು ಪುಟ 1041 ರಲ್ಲಿ ನೋಡಬಹುದು. ಇದೇ ವಿಷಯದ ಬಗ್ಗೆ ಪ್ರಕರಣವೊಂದರಲ್ಲಿ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ನೀಡಿರುವ ತೀರ್ಪಿನ ಪ್ರತಿಯನ್ನು ಪುಟ 1043 ರಲ್ಲಿರಿಸಿದ್ದು, ಅದರಲ್ಲಿ ಹೇಳಿರುವಂತೆ ಸದರಿ ನಿಯಮಗಳು ಬರುವುದಕ್ಕಿಂತ ಮುಂಚೆ ನೀಡಿದಂತ ಜಾತಿ ಪ್ರಮಾಣ ಪತ್ರದ ಪರಿಶೀಲನೆಯು ಜಾತಿ ಪರಿಶೀಲನೆಯ ಸಮಿತಿಯ ಅಧಿಕಾರಿ ವ್ಯಾಪ್ತಿಗೆ ಬರುವುದಿಲ್ಲ. ಅದರಂತೆ, ಈ ಪ್ರಕರಣದಲ್ಲಿ ಶ್ರೀ.ಎಂ.ಎಸ್.ಮಾಣಿಕ್‌ರವರು 03/10/1989 ರ ಜಾತಿ ಪ್ರಮಾಣ ಪತ್ರವನ್ನು ನೀಡಿರುತ್ತಾರೆ. ಈ ಬಗ್ಗೆ ಕೆಳಗಿನ ಪುಟ 1900ನ್ನು ಹಾಗೂ ಕಂಡಿಕೆ 616ನ್ನು ನೋಡಬಹುದು.*

*678) ಪುಟ 1041-1040 ರ ಸುತ್ತೋಲೆಯಲ್ಲಿ ಸ್ಪಷ್ಟ ಪಡಿಸಿರುವಂತೆ ಸದರಿ ನಿಯಮಗಳು ಜಾರಿಗೆ ಬರುವುದಕ್ಕಿಂತ ಮುಂಚೆ ನೀಡಿದ ಜಾತಿ ಪ್ರಮಾಣ ಪತ್ರದ ಬಗ್ಗೆ ಸಂಬಂಧಪಟ್ಟ ತಹಶೀಲ್ದಾರ್‌ರವರು ವಿಚಾರಣೆ ಮಾಡಿ ಕ್ರಮ ತೆಗೆದುಕೊಳ್ಳಬೇಕಾಗಿರುತ್ತದೆ. ಆದರೆ ಈ ಪ್ರಕರಣದಲ್ಲಿ ಅಂದಿನ ತಹಶೀಲ್ದಾರ್, ಗುಲ್ಬರ್ಗಾ ರವರು ಜಾತಿ ಪ್ರಮಾಣ ಪತ್ರ ನೀಡಿದ್ದು, ಮತ್ತು ಅದನ್ನು, ಕೆಳಗಿನ ಕಡತದ ಪುಟ 288-282 ರ ಗುಲ್ಬರ್ಗಾ ಜಿಲ್ಲಾಧಿಕಾರಿಗಳ ವರದಿಯಲ್ಲಿ ತಿಳಿಸಿರುವಂತೆ ಶ್ರೀ.ಎಂ.ಎಸ್.ಮಾಣಿಕ್‌ರವರು ಗೊಂಡ ಜಾತಿಗೆ ಸೇರಿದವರೆಂದೇ ದೃಢಪಡಿಸಿರುತ್ತಾರೆ. ಇದಲ್ಲದೆ ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಶ್ರೀ.ಎಂ.ಎಸ್.ಮಾಣಿಕ್‌ರವರ ಮೇಲೆ ನಡೆದ ವಿಚಾರಣೆಯಲ್ಲಿ ಅವರ ಮೇಲೆ ಹೊರಿಸಲಾದ ಆರೋಪವು ಸಾಬೀತಾಗಿಲ್ಲವೆಂದು ಪರಿಗಣಿಸಿ ವಿಚಾರಣೆಯನ್ನು ಮುಕ್ತಾಯಗೊಳಿಸಲಾಗಿದೆ. ಹೀಗಿರುವಾಗ ಸದರಿಯವರು ಯಾವ ಜಾತಿಗೆ ಸೇರಿದವರಾಗಿರುತ್ತಾರೆ ಎಂಬುದರ ಬಗ್ಗೆ ಸಿಂಧುತ್ವ ಪ್ರಮಾಣ ಪತ್ರ ಪಡೆಯಲು ಸಾಧ್ಯವಿಲ್ಲದಿರುವುದರಿಂದ ಮತ್ತು ಅವರ ಮೇಲಿನ ವಿಚಾರಣಾ ಪ್ರಕರಣವನ್ನು ಮುಕ್ತಾಯಗೊಳಿಸಿರುವುದರಿಂದ ಗುಲ್ಬರ್ಗಾ ಜಿಲ್ಲಾಧಿಕಾರಿಗಳ ಪುಟ 1039 ರ ವರದಿಯನ್ನು ಒಪ್ಪಿಕೊಂಡು ಈ ಕಡತದ ಪ್ರಕರಣವನ್ನು ಇಲ್ಲಿಗೆ ಮುಕ್ತಾಯಗೊಳಿಸಬಹುದು"* ಎಂದು ಅನುಮೋದನೆಗೆ ಮಂಡಿಸಿರುವುದು ಕಂಡುಬರುತ್ತದೆ.

13. ಮೇಲಿನ ಅಂಶಗಳನ್ನು ಗಮನಿಸಿದಾಗ, ವಿಚಾರಣಾಧಿಕಾರಿಯ ವರದಿಯನ್ನು ತಿರಸ್ಕರಿಸಿ ಎದುರುದಾರರನ್ನು ಸರ್ಕಾರಿ ಸೇವೆಯಿಂದ ವಜಾ ಮಾಡಲು ಕರ್ನಾಟಕ ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ ಸೂಚಿಸಿರುವುದರ ಮೇರೆಗೆ ಕೂಡಲೇ ಕ್ರಮ ಕೈಗೊಳ್ಳಬೇಕಾಗಿದ್ದು, ಸದರಿ ವಿಷಯವನ್ನು ಸಚಿವ ಸಂಪುಟದ ಮುಂದೆ ಮಂಡಿಸಲು ಮುಖ್ಯ ಮಂತ್ರಿಗಳು ಆದೇಶ ಮಾಡಿದರೂ

ಸಹ ಅಧಿಕಾರಿಗಳು ಮುಖ್ಯ ಮಂತ್ರಿಗಳ ಆದೇಶದ ಪ್ರಕಾರ ಕ್ರಮ ವಹಿಸದೆ ಇರುವುದು ಕಂಡುಬರುತ್ತದೆ.

14. ಈ ಹಂತದಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 11ಎ ನ್ನು ಪರಿಶೀಲಿಸುವುದು ಸೂಕ್ತವೆಂದು ಕಂಡುಬರುತ್ತದೆ.

15. ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 11ಎ ರನ್ವಯ ಈ ಕೆಳಕಂಡಂತೆ ಆಸ್ಪದ ಕಲ್ಪಿಸಲಾಗಿದೆ.

> *"ಶಿಸ್ತು ಪ್ರಾಧಿಕಾರಿಯು ತಾನೇ ವಿಚಾರಣಾ ಪ್ರಾಧಿಕಾರಿಯಾಗಿಲ್ಲದಿರುವಲ್ಲಿ ತಾನು ಲಿಖಿತದಲ್ಲಿ ಅಭಿಲೇಖಿಸತಕ್ಕ ಪ್ರಕರಣಗಳಿಗಾಗಿ ವಿಚಾರಣಾ ಪ್ರಾಧಿಕಾರಿಗೆ ಮುಂದಿನ ವಿಚಾರಣೆ ಮತ್ತು ವರದಿಗಾಗಿ ಪ್ರಕರಣವನ್ನು ಕಳುಹಿಸಬಹುದು ಮತ್ತು ವಿಚಾರಣಾ ಪ್ರಾಧಿಕಾರಿಯ ಆ ತರುವಾಯ ಸಾಧ್ಯವಾದ ಮಟ್ಟಿಗೆ 11ನೇ ನಿಯಮದ ಉಪಬಂಧಗಳಿಗನುಸಾರವಾಗಿ ಮುಂದಿನ ವಿಚಾರಣೆ ನಡೆಸಲು ಕ್ರಮ ಕೈಗೊಳ್ಳತಕ್ಕದ್ದು".*

16. ಮುಖ್ಯ ಮಂತ್ರಿಗಳು ಮರು ವಿಚಾರಣೆಗೆ ಆದೇಶ ಮಾಡಿದ ನಂತರ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 11 ರ ಪ್ರಕಾರ ಕ್ರಮವನ್ನು ಕೈಗೊಳ್ಳಬೇಕಾಗಿತ್ತು. ಆದರೆ ಸದರಿಯವರು ಆ ರೀತಿಯಲ್ಲಿ ಕ್ರಮ ಕೈಗೊಳ್ಳದೆ ಆರೋಪಿತ ಅಧಿಕಾರಿಗಳನ್ನು ದೋಷಮುಕ್ತಗೊಳಿಸಿರುವುದು ಸರಿಯಾದ ಕ್ರಮವಾಗಿರುವುದಿಲ್ಲವೆಂದು ಅಭಿಪ್ರಾಯ ಪಡುತ್ತೇನೆ.

17. ಸರ್ಕಾರದ ಅಧೀನ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಇಲಾಖೆ, ಇವರು ಕೆಲವು ದಾಖಲಾತಿಗಳನ್ನು ಹಾಜರು ಪಡಿಸಿರುತ್ತಾರೆ. ಸದರಿಯವರು ಹಾಜರು ಪಡಿಸಿರುವ ಶಾಲಾ ದಾಖಲಾತಿ ವಹಿಯ ಕ್ರ.ಸಂ.615 ರಲ್ಲಿ ಎದುರುದಾರರಿಗೆ ಸಂಬಂಧಪಟ್ಟ ದಾಖಲಾತಿಯ ನಮೂದು ಇದ್ದು, ಅದನ್ನು ಪರಿಶೀಲಿಸಿದಾಗ ಶ್ರೀ.ಮಾಣಿಕ್ ಬಿನ್ ಮಲ್ಲಪ್ಪ ಇವರು ಕುರುಬ ಜಾತಿಗೆ ಸೇರಿದವರಾಗಿರುತ್ತಾರೆಂದು ನಮೂದು ಕಂಡುಬರುತ್ತದೆ. ಶಿಕ್ಷಣ ಇಲಾಖೆಯವರು ದಿ.6/6/1970 ರಂದು ಎದುರುದಾರರಿಗೆ ನೀಡಿರುವ ವರ್ಗಾವಣೆ ಪ್ರಮಾಣ ಪತ್ರದಲ್ಲಿ ಎದುರುದಾರರ ಜಾತಿ ಹಿಂದೂ ಕುರುಬ ಎಂದು ನಮೂದಿಸಿರುವುದು ಕಂಡುಬರುತ್ತದೆ. ಸದರಿ ದಾಖಲಾತಿಯಲ್ಲಿ ಎದುರುದಾರರ ಶಾಲಾ ದಾಖಲಾತಿ ಸಂ.615 ಎಂದು ನಮೂದು ಇದ್ದು, ಸದರಿ ದಾಖಲಾತಿ ಸಂಖ್ಯೆಯು ಶಾಲಾ ದಾಖಲಾತಿ ವಹಿಯಲ್ಲಿರುವ ದಾಖಲಾತಿ ಸಂಖ್ಯೆಗೆ ತಾಳೆಯಾಗುತ್ತದೆ. ದಿ.20/5/1999 ರಂದು ತಹಶೀಲ್ದಾರ್, ಬಸವಕಲ್ಯಾಣ, ಇವರು ನೀಡಿರುವ ವರದಿಯನ್ನು ಪರಿಶೀಲಿಸಿದಾಗ, ಶ್ರೀ.ಮಾಣಿಕ್ ತಂದೆ ಮಲ್ಲಪ್ಪ ಇವರು ಕುರುಬ ಜಾತಿಗೆ ಸೇರಿದವರಾಗಿರುತ್ತಾರೆ ಹಾಗೂ ಅವರು ಗೊಂಡ ಪರಿಶಿಷ್ಟ ಪಂಗಡ ಎಂದು ಸುಳ್ಳು ಜಾತಿ ಪ್ರಮಾಣ ಪತ್ರವನ್ನು ಪಡೆದಿರುವುದು ಸ್ಪಷ್ಟವಾಗುತ್ತದೆಯೆಂದು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಬೀದರ್ ಇವರಿಗೆ ವರದಿಯನ್ನು ನೀಡಿರುವುದು ಕಂಡುಬರುತ್ತದೆ. ದಿ.15/6/1973 ರಲ್ಲಿ ಶಿಕ್ಷಣ ಇಲಾಖೆಯವರು ನೀಡಿರುವ ವರ್ಗಾವಣೆ ಪ್ರಮಾಣ ಪತ್ರದಲ್ಲಿ ಶ್ರೀ.ಮಾಣಿಕ್‌ರವರ ಜಾತಿ ಹಿಂದೂ ಕುರುಬ ಎಂದು ನಮೂದಾಗಿರುವುದು ಕಂಡುಬರುತ್ತದೆ. ಎದುರುದಾರರು ಕುರುಬ ಸಮುದಾಯಕ್ಕೆ ಸೇರಿದವರಾಗಿರುತ್ತಾರೆಂಬ ಬಗ್ಗೆ ಹಲವಾರು ದಾಖಲಾತಿಗಳು ಕಂಡುಬರುತ್ತಿದ್ದು, ಆದ್ದರಿಂದ, ವಿಚಾರಣಾಧಿಕಾರಿಯ ವರದಿಯನ್ನು ಒಪ್ಪದೆ ಮರು ವಿಚಾರಣೆಗೆ ಆದೇಶಿಸಿರುವುದು ಸೂಕ್ತವಾದ ಕ್ರಮವಾಗಿರುತ್ತದೆ. ಆದರೆ, ಇಷ್ಟೊಂದು ದಾಖಲಾತಿಗಳು ಇದ್ದರೂ ಸಹ ಮರು ವಿಚಾರಣೆಯನ್ನು ನಡೆಸದೆ ಪ್ರಕರಣವನ್ನು ಮುಕ್ತಾಯಗೊಳಿಸಿರುವುದು ಸಮಂಜಸವಾಗಿರುವುದಿಲ್ಲ ಮತ್ತು

ಎದುರುದಾರರಿಗೆ ಸಹಾಯ ಮಾಡುವ ಉದ್ದೇಶದಿಂದಲೇ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ ಎಂದು ಭಾವಿಸಬಹುದಾಗಿದೆ ಮತ್ತು ಮೇಲ್ನೋಟಕ್ಕೆ ಎದುರುದಾರರಿಗೆ ಸಹಕಾರ ನೀಡಿರುವುದು ಕಂಡುಬರುತ್ತದೆ. ಆದ್ದರಿಂದ, ಎದುರುದಾರರನ್ನು ಆರೋಪಮುಕ್ತ ಗೊಳಿಸಿ ಮಾಡಿರುವ ಆದೇಶವನ್ನು ಪುನರ್ ಪರಿಶೀಲಿಸುವ ಅಗತ್ಯ ಕಂಡುಬರುತ್ತದೆ.

18. ಈ ಪ್ರಕರಣದಲ್ಲಿ ಎದುರುದಾರರು ಸೇವೆಗೆ ಸೇರಿದ ತಕ್ಷಣದಲ್ಲಿ ಅವರ ಜಾತಿಯ ಬಗ್ಗೆ ತಕರಾರು ಬಂದಿದ್ದು, ಅಂದಿನಿಂದಲೇ ಹಲವಾರು ವರದಿಗಳನ್ನು ಪಡೆಯಲಾಗಿದೆ ಮತ್ತು ಸದರಿಯವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಕೂಡ ದಾಖಲಿಸಲಾಗಿದೆ. ಆದ್ದರಿಂದ, ಸದರಿಯವರ ಪರೀಕ್ಷಾ ಅವಧಿ (ಪ್ರೊಬೇಷನರಿ) ಯನ್ನು ಯಾವ ರೀತಿಯಲ್ಲಿ ಘೋಷಿಸಲಾಗಿದೆಯೆನ್ನುವ ಬಗ್ಗೆ ಕೂಡ ಯಾವುದೇ ದಾಖಲಾತಿಗಳು ಕಂಡುಬರುತ್ತಿಲ್ಲ. ಅಧಿಕಾರಿಯ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾದ ಸಂದರ್ಭದಲ್ಲಿ ಸದರಿ ಅಧಿಕಾರಿಯ ಪರೀಕ್ಷಾ ಅವಧಿ ತೃಪ್ತಿಕರವಾಗಿ ಪೂರ್ಣಗೊಂಡಿರುತ್ತದೆಯೆಂದು ಘೋಷಿಸಲು ಅವಕಾಶವಿಲ್ಲವೆಂದು ಅಭಿಪ್ರಾಯ ಪಡುತ್ತೇನೆ. ಆದ್ದರಿಂದ, ಸದರಿ ಅಧಿಕಾರಿಯ ಪರೀಕ್ಷಾ ಅವಧಿಯನ್ನು ಘೋಷಿಸಲಾಗಿದೆಯೇ ಇಲ್ಲವೇ ಎನ್ನುವ ಬಗ್ಗೆ ಹಾಗೂ ಘೋಷಿಸಿದ್ದಲ್ಲಿ ಕ್ರಿಮಿನಲ್ ಪ್ರಕರಣ ವಿಚಾರಣೆಗೆ ಬಾಕಿಯಿದ್ದ ಸಂದರ್ಭದಲ್ಲಿ ಪರೀಕ್ಷಾ ಅವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಲಾಗಿದೆಯೆಂದು ಯಾವ ರೀತಿಯಲ್ಲಿ ಘೋಷಿಸಲಾಗಿದೆ ಎನ್ನುವ ಬಗ್ಗೆ ಪರಿಶೀಲನೆ ನಡೆಸುವುದು ಸೂಕ್ತವೆಂದು ಕಂಡುಬರುತ್ತದೆ. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಕೆಳಗಿನಂತೆ ಶಿಫಾರಸ್ಸು ಮಾಡಲಾಗಿದೆ.

i. ವಿಚಾರಣಾಧಿಕಾರಿಯ ವಿಚಾರಣಾ ವರದಿಯ ಆಧಾರದಲ್ಲಿ ಮತ್ತು ಇತರ ಅಂಶಗಳ ಆಧಾರದಲ್ಲಿ ಎದುರುದಾರರನ್ನು ಆರೋಪಮುಕ್ತಗೊಳಿಸಿ ಮಾಡಿರುವ ಆದೇಶವನ್ನು ಪುನರ್ ಪರಿಶೀಲಿಸಿ ಸೂಕ್ತ ಆದೇಶವನ್ನು ಮಾಡಲು ಕ್ರಮ ಕೈಗೊಳ್ಳುವಂತೆ ಹಾಗೂ

ii. ಎದುರುದಾರರ ಪರೀಕ್ಷಾ ಅವಧಿಯು ತೃಪ್ತಿಕರವಾಗಿ ಪೂರ್ಣಗೊಂಡ ಬಗ್ಗೆ ಘೋಷಣೆ ಮಾಡಲಾಗಿದೆಯೇ ಮತ್ತು ಘೋಷಣೆ ಮಾಡಿದ್ದಲ್ಲಿ ಸದರಿಯವರ ವಿರುದ್ಧ ಕ್ರಿಮಿನಲ್ ಪ್ರಕರಣ ವಿಚಾರಣೆಗೆ ಬಾಕಿಯಿದ್ದ ಸಂದರ್ಭದಲ್ಲಿ ಪರೀಕ್ಷಾ ಅವಧಿಯು ತೃಪ್ತಿಕರವಾಗಿ ಪೂರ್ಣಗೊಂಡಿದೆಯೆನ್ನುವ ಬಗ್ಗೆ ಯಾವ ರೀತಿಯಲ್ಲಿ ಘೋಷಿಸಲಾಯಿತು ಮತ್ತು ಈ ಬಗ್ಗೆ ತಪ್ಪಿತಸ್ಥ ಅಧಿಕಾರಿಯ ವಿರುದ್ಧ ಸೂಕ್ತ ಕ್ರಮವನ್ನು ಕೈಗೊಳ್ಳುವಂತೆ ಶಿಫಾರಸ್ಸು ಮಾಡಲಾಗಿದೆ.

19. ಮೇಲ್ಕಂಡ ಹಿನ್ನೆಲೆಯಲ್ಲಿ ಎದುರುದಾರರ ವಿರುದ್ಧ ಮೇಲ್ಕಂಡ ಶಿಫಾರಸ್ಸಿನಂತೆ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಶಿಫಾರಸ್ಸು ಮಾಡಲಾಗಿದ್ದು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

1/3/16

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು-2,
ಕರ್ನಾಟಕ ರಾಜ್ಯ, ಬೆಂಗಳೂರು.